(ಇಂದು ದಿನಾಂಕ 10-10-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ-**

ನನ್ನ ತಂದೆಯವರು ಖರೀದಿಸಿರುವ ಜಾಗ ಮೂಲತಃ ಯಾರಿಗೆ ಸೇರಿದ್ದು ಎಂಬುದು ನನಗೆ ಗೊತ್ತಿಲ್ಲ. ಸ.ನಂ. 188 ರಲ್ಲಿ ಮೂಲತಃ ಎಷ್ಟು ಜಾಗ ಇತ್ತು ಎಂದು ಗೊತ್ತಿಲ್ಲ. ಪ್ರತಿವಾದಿಯವರಿಗೆ ಎಷ್ಟು ಜಾಗ ಇದೆ ಎಂದು ನಾನು ಖಚಿತಪಡಿಸಿಕೊಂಡಿರುವುದಿಲ್ಲ. ನಾನು ಹೇಳಿರುವಂತಹ ಅಕೇಶಿಯಾ, ಹಲಸು ಹಾಗೂ ಗೇರು ಮರಗಳು ನಾನು ನೆಟ್ಟಿದ್ದು ಅಲ್ಲ, ಅವು ತಾನಾಗಿಯೇ ಬೀಜ ಬಿದ್ದು ಬೆಳೆದಿರುತ್ತವೆ ಎಂದರೆ ಸರಿಯಲ್ಲ. ನನ್ನ ಸ್ಥಳದ ಎಷ್ಟು ಗುಂಟೆ ರಸ್ತೆಗೆ ಹೋಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸರ್ವೆ ಮಾಡಲು ಬಂದ ಸಮಯದಲ್ಲಿ ಮೋಜಣಿದಾರರ ಬಳಿ ಕೇಳಲು ತೊಂದರೆ ಇರಲಿಲ್ಲ.

ನಾನು ವಾಸ್ತವ್ಯದಲ್ಲಿ ಇರುವ ಮನೆ ನನ್ನ ತಂದೆಯವರು 2014 ರಲ್ಲಿ ವಿಲ್ ಬರೆದುಕೊಟ್ಟಿದ್ದು, ಅವರ ನಿಧನದ ನಂತರ ವಿಲ್ ಪ್ರಕಾರ ವಿನಾಯಕರವರಿಗೆ ನಮ್ಮ ತಕರಾರು ಇಲ್ಲವೆಂದು ನೀಡಿರುತ್ತೇವೆ.

ನಾನು ಊರಿಗೆ ಬಂದಾಗ ನನ್ನ ತಂಗಿಯ ಮನೆ ಹಾಗೂ ಮಾವನ ಮನೆಯಲ್ಲಿ ಉಳಿದುಕೊಳ್ಳುತ್ತೇನೆ. 0-9-0 ಜಾಗವನ್ನು ರಸ್ತೆಗೆ ಹೋಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯವರು ನಮ್ಮ ಜಾಗವನ್ನು ಅತಿಕ್ರಮಣ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಪ್ಪು ಕಲ್ಪನೆಯಿಂದ ಪ್ರತಿವಾದಿಯವರು ಜಾಗವನ್ನು ಅತಿಕ್ರಮಣ ಮಾಡಿದ್ದಾರೆ ಎಂದು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಮೋಜಣಿದಾರರು ಹಾಕಿದ ಗಡಿಕಲ್ಲನ್ನು ನೋಡದೇ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಾಗದಲ್ಲಿ ಸಾಗುವಳಿ ಮಾಡದೇ ಇರುವುದರಿಂದ ನನಗೆ ಎಷ್ಟೆಷ್ಟು ಜಾಗ ಇದೆ ಎಂದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ನಾನು ಹೇಳಿರುವಂತಹ ಅಕೇಶಿಯಾ ಮರಗಳು ನಮ್ಮ ಜಾಗದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವಂತಹ ಜಾಗವನ್ನು ಪ್ರತಿವಾದಿಯರು ಅತಿಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ